ದತ್ತೂನ ಮಾತು ಕೇಳಿ ಶರಣಪ್ಪ ಕಕ್ಕಾಬಿಕ್ಕಿ. ದತ್ತೂನ್ನ ವಿಚಿತ್ರವಾಗಿ ದಿಟ್ಟಿಸಿದ. ಏನು ಹೀಂಗಾದ್ರ ಎನ್ನುವಂತೆ ಪ್ರಶ್ನಾರ್ಥಕ ನೋಟ ಅವನ ಕಣ್ಣೊಳಗಿತ್ತು.

'ವಿಷಯ ನಿಮಗೆ ಮೊದಲು ಹೇಳಿ ಬಿಡತೇನಿ' ದತ್ತು ನಿರುದ್ವಿಗ್ನವಾಗಿ ಸುರುಮಾಡಿದ 'ಈಗ ಸ್ವಲ್ಪ ಹೊತ್ತಿಗೆ ಮೊದಲು ಒಂದಿಷ್ಟು ಹುಡುಗರು ಗಾಂಧಿ ಸರ್ಕಲ್‌ದೊಳಗ ನಿಂತು ಹೋಗಿ ಬರೋ ಹುಡುಗೇರಿಗೆ ಕಾಡಿಸುತ್ತಿದ್ರು. ಈಗಿವರು ಪೊಲೀಸರ ಅತಿಥಿಗಳು. ಇವರಲ್ಲಿ ನಿಮ್ಮ ಮಗ ಮಂಜೂನು ಒಬ್ಬಾಂವ.'

'ಹಾಂ!' ಶರಣಪ್ಪ ಹೌಹಾರಿಬಿಟ್ಟ. ಪ್ರಸಂಗ ಹೀಂಗ ಎದುರಾದೀತು ಎಂದವನು ಕನಸುಮನಸಲ್ಲೂ ಅಂದುಕೊಂಡಿರಲಿಲ್ಲ. ಅವನು ತಪ್ಪನಾಗಿ ಕೂತ. ಇದಕ್ಕೇನು ಪ್ರತಿಕ್ರಿಯಿಸುವುದೋ ತಕ್ಷಣ ಹೊಳೀಲಿಲ್ಲ. ಒಂದು ಕಾಲಕ್ಕೆ ತಾನು ಆಫೀಸೊಳಗ ಮಾಡಬಾರದ್ದು ಮಾಡಿದ್ದರೂ ಎಂದೂ ಹೀಂಗ ಪೊಲೀಸರ ತನಕ ಹೋಗಿರಲಿಲ್ಲ.

**'ಒಂದು ವ್ಯಾಳ್ಯಾ ಇದೇನಾದ್ರೂ ರೇಪ್ ಪ್ರಸಂಗ ಅಂತ ಕೂಗೆದ್ದು ಬಿಡ್ತು ಅಂತಂದ್ರ ನಿಮ್ಮ ಹುಡುಗನ ಕರಿಯರ್ರೇ ಹಾಳು. ಆದ್ದರಿಂದ ನಾ ಹೇಳೋದು ಕೇಳ್ರಿ. ಕೇಸು ಇನ್ನು ನಮ್ಮ ಕೈಯೊಳಗs ಅದೆ. ಅವರು ಮೂವತ್ತು ಸಾವಿರ ಕೇಳಿದ್ರ ಮೂವತ್ತು, ನಲವತ್ತು ಕೇಳಿದ್ರ ನಲವತ್ತು ಮೊದಲು ಕೊಟ್ಟು ಮುಕ್ತರಾಗಿ ಬಿಡೋಣು.'**

'ಅಲ್ಲಿನ ಇನ್‌ಸ್ಪೆಕ್ಟರ್ ನನ್ನ ದೋಸ್ತ' ದತ್ತು ಮಾತು ಮುಂದುವರಿಸಿದ. 'ವಿಚಾರಣೆ ಹೊತ್ತಿಗೆ ನೀವು, ಆಫೀಸು ಎಲ್ಲದರ ಬಗ್ಗೆ ಮಂಜು ಬಾಯಿಬಿಟ್ಟಾಗ ಇನ್‌ಸ್ಪೆಕ್ಟರು ನನಗೆ ಫೋನ್ ಮಾಡಿದ. ನಾನು, ಆ ಹುಡುಗನ ಮ್ಯಾಲ ಯಾವ ಕ್ರಮ ತಗೋಬ್ಯಾಡ ಅಂತ ಹೇಳಿ ನಿಂದರಸೇನಿ.'

'ಈಗೇನು ಮಾಡೋದು?' ಶರಣಪ್ಪ ತ್ತ ತ್ತ ತ್ತ ಮಾಡಿದ. ಇಂಥ ಪ್ರಕರಣವೇ ಅವನಿಗೆ ಹೊಸಾದು. ಮಗ ಫಾರಿನ್ನಿಗೆ ಹೋಗಿ ದಂಡುಕಡಿದು ಬರ್ತಾನ ಅಂದುಕೊಂಡಿದ್ದರೆ... ಇದೇನಿದು!...

'ಈಗಿನ ಕಾಲದ ಹುಡುಗರೇ ಹೀಂಗ. ತಾವು ಸುದ್ದಾ ಗಂಡಸರಾಗೇವಿ ಅಂತ ತೋರಿಸೋ ಚಪಲ. ಇರ್ಲಿ ಬಿಡ್ರಿ. ನೀವು ಮಾತ್ರ ಗಾಭರ್ಯಾಗಬ್ಯಾಡ್ರಿ. ಹುಡುಗ ವಯಸ್ಸು ಅಂಥಾದ್ದು. ಈ ವಯಸ್ಸಿನೊಳಗ ಎಲ್ಲಾರೂ ಒಂದಲ್ಲ ಒಂದು ಸರ್ತಿ ಹೀಂಗ ಮಾಡೇ ಇರ್ತಾರ. ನಾನೂ ಮಾಡಿದವನೇ. ಆದರೆ ಹೀಂಗ ಸಿಗಿಬೀಳಲಿಲ್ಲ ಅಷ್ಟೇ.'

'ಅಲ್ಲ... ಅಲ್ಲಿ ನಾ ಏನು ಮಾಡಬೇಕು?'

'ಏನೂ ಮಾಡಬೇಡ್ರಿ– ಅವರ ಫೀ ಕೊಟ್ರಾತು ಅಷ್ಟs...'

'ಎಷ್ಟು?...'

'ಒಂದ್ ಮೂವತ್ತು ಸಾವಿರ ರೆಡಿ ಮಾಡಿಟ್ಟು ಕೋರಿ. ಎಲ್ಲ ಸುರಳೀತ ಆಗ್ತದ.'

'....'

'ಯಾಕ ಸುಮ್ಮಗಾಗಿ ಬಿಟ್ರಿ...'

'ರೊಕ್ಕ ಭಾಳಾತೇನೋ ಅಂತ...'

'ನೋಡ್ರಿ... ಇದರೊಳಗ ಚೌಕಾಸಿ ವ್ಯಾಪಾರ ಇಲ್ಲ. ಯಾಕs ನಿಮ್ಮ ಹತ್ರ ಇಲ್ಲೇನು? ನಾ